(ಇಂದು ದಿನಾಂಕಃ 15-06-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರಃ ಶ್ರೀ ಆರ್.ವಿ.ಬಿ. ವಕೀಲರಿಂದಃ**

ನಾನು 1970 ಇಸ್ವಿಯಲ್ಲಿ ಅಂಕೋಲಾದಲ್ಲಿ ಜನಿಸಿರುತ್ತೇನೆ. ನಾನು ಎಸ್.ಎಸ್.ಎಲ್.ಸಿ. ಉತ್ತೀರ್ಣನಾಗಿರುತ್ತೇನೆ. ಎಸ್.ಎಸ್.ಎಲ್.ಸಿ.ಯನ್ನು ನಾನು ಪಿ.ಎಂ.ಎಚ್. ಹೈಸ್ಕೂಲ್, ಅಂಕೋಲಾದಲ್ಲಿ ಕಲಿತಿರುತ್ತೇನೆ. ನಾನು ಎಸ್.ಎಸ್.ಎಲ್.ಸಿ. ಮುಗಿದ ನಂತರ ನಮ್ಮ ಸ್ವಂತ ಟ್ರಕ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಟ್ರಕ್‌ನ ಜೊತೆ ಬೇರೆ ಬೇರೆ ಊರುಗಳಲ್ಲಿ ಸಂಚಾರ ಮಾಡುತ್ತಿದ್ದೆ. ನಾನು 2000 ನೇ ಇಸ್ವಿಯಲ್ಲಿ ನಾನು ವಿದೇಶಕ್ಕೆ ಹೋಗಿದ್ದೆ. ನಾನು 10 ವರ್ಷ ವಿದೇಶದಲ್ಲಿ ಕೆಲಸ ಮಾಡಿರುತ್ತೇನೆ. ನಾನು ಕಾರವಾರದಲ್ಲಿ ವಾಸ ಮಾಡಿಲ್ಲ. ಕಾರವಾರದಲ್ಲಿ ನನ್ನ ಯಾವುದೇ ಮನೆ ಇರುವುದಿಲ್ಲ. ನಾನು 1 ನೇ ಪ್ರತಿವಾದಿಯವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನನಗೆ 1 ನೇ ಪ್ರತಿವಾದಿ ಜಿ.ಪಿ.ಎ. ಕೊಡಲು ಎರಡು-ಮೂರು ತಿಂಗಳ ಹಿಂದೆ ಜಿ.ಪಿ.ಎ. ಕೊಡಲು ಕರೆಸಿದ್ದರು. ನಾನು ಮುಂಬೈಗೆ ಹೋಗಿದ್ದೆ. ಜಿ.ಪಿ.ಎ. ಜೊತೆ ನನಗೆ ಯಾವುದೇ ಕಾಗದಪತ್ರ ಕೊಟ್ಟಿರುವುದಿಲ್ಲ. ಎಲ್ಲಾ ವಕೀಲರ ಬಳಿ ಇದೆ ಎಂದಿದ್ದರು. ಜಿ.ಪಿ.ಎ. ವನ್ನು ಮುಂಬೈದಲ್ಲಿ ಮಾಡಲಾಗಿತ್ತು. ಸದರಿ ಜಿ.ಪಿ.ಎ.ವನ್ನು ಕರ್ನಾಟಕ ನೋಂದಣಿ ಶುಲ್ಕ ಪಾವತಿಸುವ ಬಗ್ಗೆ ಜಿಲ್ಲಾ ನೋಂದಣಾಧಿಕಾರಿಯವರ ಮುಂದೆ ಹಾಜರುಪಡಿಸಿ ಶುಲ್ಕವನ್ನು ನೀಡಿಲ್ಲ. ಆಕಾರಣ ಸದರಿ ಜಿ.ಪಿ.ಎ. ಕರ್ನಾಟಕದಲ್ಲಿ ಉಪಯೋಗಿಸಲು ಕಾನೂನುಬದ್ಧವಾಗಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಹಳೆಯ ಸಂಬಂಧಿ, ಹತ್ತಿರದ ಸಂಬಂಧಿ ಅಲ್ಲ. 2000 ನೇ ಇಸ್ವಿಯಲ್ಲಿ ನಾನು ಅವರಿಗೆ ಭೇಟಿಯಾಗಿದ್ದೇನೆ. 2000 ನೇ ಇಸ್ವಿಯ ನಂತರ 2023 ನೇ ಸಾಲಿನಲ್ಲಿ

ಭೇಟಿಯಾಗಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಅಪಘಾತ ಆಗಿದ್ದರಿಂದ 1 ನೇ ಪ್ರತಿವಾದಿ ಅಂಕೋಲಾಗೆ ಬಂದು ಭೇಟಿಯಾಗುತ್ತಿದ್ದರು ಎನ್ನುವರು.

ಈ ಕೇಸಿನ ದಾವಾಸ್ತಿಯನ್ನು ನಾನು ಸ್ವತಃ ನೋಡಿಲ್ಲ. ಆಕಾರಣ ನನಗೆ ದಾವಾಸ್ತಿ ಹೇಗಿದೆ ಎಂದು ವೈಯಕ್ತಿಕ ಮಾಹಿತಿ ಇಲ್ಲ, ಆದರೆ 1 ನೇ ಪ್ರತಿವಾದಿ ಅದನ್ನು ವಿವರಿಸಿ ಹೇಳಿದ್ದಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು 1 ನೇ ಪ್ರತಿವಾದಿ ಮುಂಬೈಯಲ್ಲಿ ತಯಾರಿಸಿ ಕೊಟ್ಟಿದ್ದರು. ಅದನ್ನು ಅವರು ಮುಂಬೈಯಲ್ಲಿ ನನಗೆ ಕೊಟ್ಟಿದ್ದರು. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ 1 ನೇ ಪ್ರತಿವಾದಿ ಮಾಹಿತಿ ಕೊಟ್ಟಿದ್ದಾರೆ, ಆದರೆ ಅದರಲ್ಲಿ ಬರೆದ ವಿಷಯ ನನಗೆ ತಿಳಿಸಿದ್ದಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ಎಲ್ಲಿ ಮತ್ತು ಯಾರ ಕಡೆಯಿಂದ ಎಷ್ಟು ದಿವಸಗಳ ಮುಂಚೆ ತಯಾರಿಸಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಕಾರವಾರದಲ್ಲಿ ಶ್ರೀ ಕೆ.ಆರ್. ದೇಸಾಯಿ ವಕೀಲರನ್ನು ಭೇಟಿಯಾಗಿದ್ದೆ. ಅವರು ಪ್ರಕರಣದ ವಿಷಯವನ್ನು ಹೇಳಿದ್ದಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದಿಸಿದ ಮೂ.ದಾ. ನಂ. 70/1979 ಮತ್ತು ಆರ್.ಎ. ನಂ. 29/1998 ರಲ್ಲಿ ನಾನು ಪಕ್ಷಗಾರನಲ್ಲ. ಆದರೆ ಆ ಕೇಸಗಳ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಆ ಕೇಸುಗಳಲ್ಲಿ ನಾನು ಯಾವತ್ತೂ ನ್ಯಾಯಾಲಯಕ್ಕೆ ಹಾಜರಾಗಿಲ್ಲ. ಆ ಕೇಸುಗಳನ್ನು ಯಾರು ಯಾರ ಮೇಲೆ ದಾಖಲಿಸಿದ್ದಾರೆ ಎಂಬ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ಮೂ.ದಾ. ನಂ. 70/1979 ನ್ನು ಅಮೀನಾಬಿ, ಖುತೇಜಾಬಿ, ಶರಾಪಾಭಿ ಮತ್ತು ಕುಲಸುಂಬಿ ಅವರ ಅಣ್ಣ-ತಮ್ಮಂದಿರ ಮೇಲೆ ಹಾಕಿರುತ್ತಾರೆ. ಸದರಿ ಕೇಸನಲ್ಲಿ ಶೇಖ್ ಉಮರಗೆ ಆಸ್ತಿಯ ಹಕ್ಕು ಬೇಕಾದರೆ ಆತ ಪ್ರತ್ಯೇಕವಾಗಿ ದಾವೆ ಹಾಕಿ ಕಬಜೆ ಪಡೆಯಬೇಕು ಎಂದು ಆದೇಶ ಆಗಿರುತ್ತದೆ. ಅದೇ ರೀತಿ ಆರ್.ಎ. ನಂ. 29/1998 ರಲ್ಲಿ ಏನು ತೀರ್ಮಾನ ಆಗಿದೆ ನನಗೆ ಗೊತ್ತಿಲ್ಲ. ಈ ಪ್ರಕರಣಗಳಲ್ಲಿ

ಯಾರು ಯಾರು ಸಾಕ್ಷಿ ಕೊಟ್ಟಿದ್ದಾರೆ ಹಾಗೂ ಯಾವ ಯಾವ ವಕೀಲರನ್ನು ನೇಮಿಸಿದ್ದರು ಎಂದು ಗೊತ್ತಿಲ್ಲ. ಆ ಪ್ರಕರಣಗಳಲ್ಲಿ ಯಾವ ಯಾವ ದಾಖಲೆ ಪತ್ರಗಳನ್ನು ಯಾರು ಯಾರು ಹಾಜರುಪಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಶ್ರೀ ಕೆ.ಆರ್. ದೇಸಾಯಿ ವಕೀಲರಿಗೆ ಯಾವುದೇ ಮಾಹಿತಿ ಕೊಟ್ಟಿಲ್ಲ. ಎ.ಸಿ. ಮತ್ತು ಡಿ.ಸಿ. ನ್ಯಾಯಾಲಯದಲ್ಲಿ ಏನು ಪ್ರಕರಣ ಇತ್ತು ಎಂಬ ಮಾಹಿತಿ ಇದೆ. ಕ್ರಯ ಮಾಡಿದ್ದು ರದ್ದಾಗಬೇಕು ಎಂದು ಪ್ರಕರಣ ಇತ್ತು. ಅದರಲ್ಲಿ ನಾನು ಭಾಗವಹಿಸಿಲ್ಲ. ಅದರಲ್ಲಿ ಏನು ಆದೇಶ ಆಗಿದೆ ಎಂದು ನನಗೆ ಮಾಹಿತಿ ಇದೆ. ಎ.ಸಿ. ಕೋರ್ಟಿನಲ್ಲಿ ಏನು ಆದೇಶ ಆಗಿದೆ ಎಂದು 1 ನೇ ಪ್ರತಿವಾದಿ ನನಗೆ ಹೇಳಿದ್ದಾರೆ. ಮುಖ್ಯ ವಿಚಾರಣಾ ಪ್ರಮಾಣಪತ್ರಕ್ಕೆ 1 ನೇ ಪ್ರತಿವಾದಿ ಸಹಿ ಹಾಕಿದ್ದಾರೆ. 1 ನೇ ಪ್ರತಿವಾದಿ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ವೈದ್ಯಕೀಯ ಪ್ರಮಾಣಪತ್ರವನ್ನು ಕೊಟ್ಟಿಲ್ಲ.

1 ನೇ ಪ್ರತಿವಾದಿ ನನಗೆ ಜಿ.ಪಿ.ಎ. ಕೊಟ್ಟ ನಂತರ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಅನುಮತಿ ಕೋರಿ ಅರ್ಜಿಯನ್ನು ವಕೀಲರು ಸಲ್ಲಿಸಿದ್ದಾರೆ. 1 ನೇ ಪ್ರತಿವಾದಿ ಪರ ಸಾಕ್ಷ್ಯ ನುಡಿಯಲು ನಾನು ಕಾನೂನುಬದ್ಧವಾಗಿ ಅರ್ಹನಲ್ಲ ಎಂದರೆ ಸರಿಯಲ್ಲ. ಜಿ.ಪಿ.ಎ. ಗೆ ಕರ್ನಾಟಕದಲ್ಲಿ ನೋಂದಣಿ ಶುಲ್ಕ ಪಾವತಿಸದೇ ಇದ್ದ ಕಾರಣ ಅದನ್ನು ಉಪಯೋಗಿಸಲು ಸೂಕ್ತವಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಆರಾಮವಾಗಿದ್ದು, ಕೋರ್ಟಿಗೆ ಬರಲು ಸಶಕ್ತರಿದ್ದಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ನಂ.4 ರೊಂದಿಗೆ ಶಾಮೀಲಾಗಿ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಾನೂನು ಪದವಿ ಪಡೆದಿಲ್ಲ. ನನಗೆ tress pass adverse possession ಕಾನೂನು ಪದಗಳ ಬಗ್ಗೆ ಮಾಹಿತಿ ಇಲ್ಲ. ಈ ಪದಗಳನ್ನು ಉಪಯೋಗಿಸಿ ನಾನು ವಕೀಲರಿಗೆ

ಯಾವುದೇ ಮಾಹಿತಿ ಕೊಟ್ಟಿಲ್ಲ. ಪ್ರಮಾಣಪತ್ರದಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿ 1 ನೇ ಪ್ರತಿವಾದಿ ನನಗೆ ಓದಿ ಹೇಳಿದ್ದಾರೆ ಎನ್ನುವರು.

(**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.**)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ